5. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕ 2000ಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಸಲ್ಲಿಸಲು 19ನೇ ಮಾರ್ಚ್ 2001 ರಿಂದ ಮೂರು ತಿಂಗಳ ಕಾಲಾವಧಿಯನ್ನು ವಿಸ್ತರಿಸುವುದು.

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, "ಉನ್ನತ ಶಿಕ್ಷಣ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವರ ಪರವಾಗಿ 2000ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸಲು" ದಿನಾಂಕ 19ನೇ ಮಾರ್ಚ್ 2001ರಿಂದ ಮೂರು ತಿಂಗಳ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: "ಪ್ರಸ್ತಾವ ಏನೆಂದರೆ "2000ನೇ ಸಾಲಿನ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿಯ ವರದಿಯನ್ನು ಒಪ್ಪಿಸಲು ದಿನಾಂಕ 19ನೇ ಮಾರ್ಚ್ 2001ರಿಂದ ಮೂರು ತಿಂಗಳ ಕಾಲಾವಧಿಯನ್ನು ವಿಸ್ತರಿಸುವುದು".

ಪ್ರಸ್ತಾವಕ್ಕೆ ಸದನದ ಅನುಮೋದನೆ ದೊರಕಿತು ಮತ್ತು ಕಾಲಾವಧಿಯನ್ನು ಮೂರು ತಿಂಗಳಿಗೆ ವಿಸ್ತರಿಸಲಾಯಿತು.

ಶ್ರೀ ಎ. ರಾಮದಾಸ್: ಸಾರ್ ನಾನು ಕ್ಲಾರಿಫಿಕೇಶನ್ ಕೇಳಬೇಕು.

ಅಧ್ಯಕ್ಷರು: ಜೀರೋ ಅವರ್‌ನಲ್ಲೆಲ್ಲಾ ಕ್ಲಾರಿಫಿಕೇಶನ್ ಕೇಳಬಾರದು.

ಶ್ರೀ ಎ. ರಾಮದಾಸ್: ನಾನು ಏನೂ ಕ್ಲಾರಿಫಿಕೇಶನ್ ಕೇಳುತ್ತಿಲ್ಲ. ಆದರೆ ಒಂದೇ ಒಂದು ವಿಚಾರ ಇದೆ. ಎಡಿಬಿ ಕಾಮಗಾರಿ ಯಾವತ್ತಿನಿಂದ ಪ್ರಾರಂಭ ಆಗುತ್ತದೆ? ಅಲ್ಲಿ ನೀರಿನ ಸಮಸ್ಯೆ ಇದೆ. ನಾವು ಹೇಳುವಂಥದ್ದು ಏನೂ ಇಲ್ಲ. ಸಮಸ್ಯೆ ಏನೂ ಆಗುವುದಿಲ್ಲ ಎನ್ನುವುದಾದರೆ ನಮಗೆ ಏನೂ ತೊಂದರೆ ಇಲ್ಲ. ಮಂಡ್ಯ ಜಿಲ್ಲೆಯಲ್ಲಿ ಸಮಸ್ಯೆ ಆಗಬಾರದು ಎನ್ನುವ ಕಾಳಜಿಯಿಂದ ನಾವು ಇದನ್ನು ಹೇಳುತ್ತಿದ್ದೇವೆ. ಇವತ್ತಿನವರೆಗೂ ಕಳೆದ ವರ್ಷ ಕೊಟ್ಟಂತಹ ಒಂದು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿಲ್ಲ. ಮಾನ್ಯ ಅಧ್ಯಕ್ಷರೆ, ಅದಕ್ಕೊಂದು ಉತ್ತರವನ್ನು ತಾವುಕೊಡಿಸಬೇಕು.

ಅಧ್ಯಕ್ಷರು: ಆ ಬಗ್ಗೆ ನಾವು ತಕ್ಷಣವೇ ಕಾರ್ಯಕ್ರಮ ಕೈಗೊಳ್ಳುತ್ತೇವೆ ಎಂದು ಮಾನ್ಯ ಸಚಿವರು ಹೇಳಿದ್ದಾರಲ್ಲಾ?

ಶ್ರೀ ಎ. ರಾಮದಾಸ್: ಮಾನ್ಯ ಜಿಲ್ಲಾ ಮಂತ್ರಿಗಳೂ ಕೂಡ ಅದರ ಬಗ್ಗೆ ಹೇಳಿದರೆ ಚೆನ್ನಾಗಿತ್ತು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಮೇಳಾಪುರ ಎ.ಡಿ.ಬಿ. ಯೋಜನೆಯನ್ನು ಆದಷ್ಟು ಬೇಗನೇ ಅಂದರೆ ಮೇ ತಿಂಗಳೊಳಗಾಗಿ ಮುಗಿಸಬೇಕೆಂಬ ಪ್ರಯತ್ನವನ್ನು ನಾವು ನಡೆಸಿದ್ದೇವೆ.